ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ಕರ್ನಾಟಕ ನೀರಾವರಿ ಕಾಯಿದೆಗೆ ತಿದ್ದುಪಡಿ

೨೦೦ (೧೬೭) ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಾಗುಪ್ಪ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ವ್ಯವಸಾಯ ನೀರಾವರಿ ಯೋಜನೆಗಳಡಿಯಲ್ಲಿ ನಿಯಮಿತ ಬೆಳೆ ಉಲ್ಲಂಘನೆ, ಅನಧಿಕೃತ ನೀರಾವರಿ ಯಥೇಚ್ಛ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದರಿಂದ ನ್ಯಾಯಬದ್ಧ ನೀರಾವರಿ ರೈತರಿಗೆ ಅನ್ಯಾಯ ನಷ್ಟ ಆಗುತ್ತಿದ್ದು ಇದರಿಂದ ನೀರಾವರಿ ಕಾಯಿದೆ ಸಬಲವಾಗಿಲ್ಲದಿರುವುದು ಸರ್ಕಾರಕ್ಕೆ ಬಂದಿದೆಯೇ ?

ಇ) ಅನಧಿಕೃತ ಬೆಳೆ, ಬೆಳೆ ನಿಯಮ ಉಲ್ಲಂಘನೆ ನಿಯಂತ್ರಿಸಲು ನೀರಾವರಿ ಕಾಯಿದೆಯನ್ನು ಪುನರಾಲೋಚಿಸಿ ಸೂಕ್ತ ಕಲಂಗಳನ್ನು ಆಳವಡಿಸಲು, ತಿದ್ದುಪಡಿ ಮಾಡಲು ಸದನದ ಸದಸ್ಯರನ್ನೊಳಗೊಂಡ ಸಮಿತಿಯನ್ನು ನೇಮಿಸಿ ಕ್ರಮ ಕೈಗೊಳ್ಳುವುದು ಸರ್ಕಾರ ಪರಿಗಣಿಸುವುದೇ ?

ಉ) ಹೀಗಿಯೇ ಮುಂದುವರಿದರೆ ನೀರಾವರಿ ಪ್ರದೇಶಗಳಲ್ಲಿ ರೈತರಿಗೆ ನಷ್ಟವಾಗಿ, ನ್ಯಾಯ ನೀತಿ ಉಲ್ಲಂಘನೆಯೇ ಮೇಲುಗೈ ಆಗುವುದಿಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಹೌದು ಬಂದಿದೆ.

ಆ) ಹೌದು ಬಂದಿದೆ.

ಇ) ಕಾಯಿದೆಗೆ ತಿದ್ದುಪಡಿ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಕರಡು ಮಸೂದೆಯನ್ನು ಸದನದ ಪರಿಶೀಲನೆಗಾಗಿ ಮಂಡಿಸಿದಾಗ ಸದನವು ಈ ಬಗ್ಗೆ ನಿರ್ಧರಿಸುವುದಾಗಿದೆ.

ಈ) ಹೌದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಪ್ರೊ॥ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ೧೧ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಪಟ್ಟಿಯನ್ನು ಸಭೆಯಮುಂದೆ ಮಂಡಿಸಲಾಗಿದೆ.

ಸರೋಜಿನಿ ಮಹಿಷಿ ವರದಿ

೩೫೧ (೪೧೯) ಶ್ರೀ ಬಿ. ರಾಜಾಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರೋಜಿನಿ ಮಹಿಷಿಯವರ ವರದಿಯನ್ನು ಸರ್ಕಾರಕ್ಕೆ ಯಾವಾಗ ಸಲ್ಲಿಸಲಾಯಿತು ?

ಆ) ವರದಿಯ ಶಿಫಾರಸ್ಸುಗಳ ಪೂರ್ಣ ಅನುಷ್ಠಾನಕ್ಕಾಗಿ ಸರ್ಕಾರಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

ಇ) ವರದಿಯಲ್ಲಿರುವ ಯಾವ ಅಂಶಗಳನ್ನು ಸರ್ಕಾರದವರು ಕೈ ಬಿಡಲು ಯೋಚಿಸಿದ್ದಾರೆ ?